ಬೆಂಗಳೂರಿನಲ್ಲಿ ಸಂಚಾರ ಜನಸಂಖ್ಯೆಗೆ ತಕ್ಕಂತೆ ಸಾರಿಗೆ ವ್ಯವಸ್ಥೆ

139 (936). ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೆಂಗಳೂರಿನ ಅಂದಾಜು ಜನ ಸಂಖ್ಯೆ ಎಷ್ಟು?

ಆ) ಇದರಲ್ಲಿ ಸಂಚಾರಿ ಜನಸಂಖ್ಯೆ ಎಷ್ಟು? (ನಿತ್ಯ ಬಂದು ಹೋಗುವವರ ಸಂಖ್ಯೆ ಎಷ್ಟು)

ಇ) ಬೆಂಗಳೂರು ಮಹಾನಗರದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಸರ್ಕಾರವು ಸೂಕ್ತವಾದ ಸಂಚಾರದ ವ್ಯವಸ್ಥೆಯನ್ನು ಮಾಡಿರುವುದೇ?

ಈ) ಹಾಗಿದ್ದಲ್ಲಿ ಆ ಸಂಚಾರ ವ್ಯವಸ್ಥೆ ಯಾವುದು?

ಉ) ಇದಕ್ಕಾಗಿ ಸರ್ಕಾರ ಪ್ರತಿ ವರ್ಷ ಎಷ್ಟು ಹಣವನ್ನು ಖರ್ಚು ಮಾಡುತ್ತಿದೆ?

ಶ್ರೀ ಆಜೀಜ್ ಸೇಠ್ (ಸಾರಿಗೆ ಸಚಿವರು):-

ಅ) 41.08 ಲಕ್ಷಗಳು

ಆ) ಬೆಂಗಳೂರು ನಗರಕ್ಕೆ ಬಂದು ಹೋಗುವ ಜನಗಳ ಸಂಖ್ಯೆ ಸುಮಾರು 2 ಲಕ್ಷಗಳು. ನಗರ ಸಾರಿಗೆ ಬಸ್ಸಿನಲ್ಲಿ 18 ಲಕ್ಷ ಜನರು ಪ್ರಯಾಣ ಮಾಡುತ್ತಾರೆ.

ಇ) ಹೌದು. ಪ್ರತಿ ದಿನವೂ 1436 ಬಸ್ಸುಗಳು ಓಡಾಡುತ್ತವೆ. ಇವುಗಳಲ್ಲದೆ ಮಾರ್ಚ್ 1992ರ ಹೆಚ್ಚುವರಿಯಾಗಿ 139 ಮಾರ್ಗಸೂಚಿಗಳನ್ನು ಹಾಗೂ 1992-93ನೇ ಸಾಲಿನಲ್ಲಿ 120 ಮಾರ್ಗಸೂಚಿ ಮಾರ್ಗಗಳನ್ನು ಪ್ರಾರಂಭಿಸಲಾಗುವುದು.

ಈ) ಬೆಂಗಳೂರು ನಗರ ಸಾರಿಗೆಯವರು ಓಡಿಸುತ್ತಿರುವ ಬಿ.ಟಿ.ಎಸ್. ಬಸ್ಸುಗಳು ಹಾಗೂ ಆಟೋರಿಕ್ಷಾಗಳು ಮತ್ತು ಟ್ಯಾಕ್ಸಿಗಳು.

ಉ) ಪ್ರತಿ ವರ್ಷ ಸುಮಾರು 7.5 ಕೋಟಿ ರೂ. ಗಳನ್ನು ಸರಾಸರಿ ಮೊತ್ತವನ್ನು ಹೆಚ್ಚುವರಿ ಬಸ್ಸುಗಳನ್ನು ಯಂತ್ರ, ಕಾರ್ಯಗಾರ ಹಾಗೂ ಕಟ್ಟಡಗಳು ಇತ್ಯಾದಿ ನಗರ ಸಾರಿಗೆ ಖರೀದಿಸಲು ಖರ್ಚು ಮಾಡಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಶ್ರೀ ಜೆ. ಪುಟ್ಟಸ್ವಾಮಿ ಗೌಡ:- ತಾರೀಖು 4-3-1992ರ 7ನೇ ಪಟ್ಟಿಯಲ್ಲಿರುವ 94 ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ತುಮಕೂರಿನಲ್ಲಿ ವಿದ್ಯುಚ್ಛಕ್ತಿ ಆಡಚಣೆ

412 (15). ಶ್ರೀ ಎನ್. ಷಫಿ ಅಹಮ್ಮದ್ (ತುಮಕೂರು):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ತುಮಕೂರಿನಲ್ಲಿ ವಿದ್ಯುಚ್ಛಕ್ತಿ ಆಡಚಣೆಯನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡ ಕ್ರಮ.

ಆ) ತುಮಕೂರಿನ ವಿದ್ಯುತ್ ಕೇಂದ್ರವು ಅತಿ ಹೆಚ್ಚಾಗಿ ಲೋಡ್ ಆಗಿರುವ ಬಗ್ಗೆ.

ಇ) ಅಂತರಸನಹಳ್ಳಿಯಲ್ಲಿನ 220:110:66 ಕೆ.ವಿ. ವಿದ್ಯುತ್ ಕೇಂದ್ರದ ಸ್ಥಾಪನೆ ಕಾರ್ಯವನ್ನು ಸಮಲೋಪಾಯದ ಹಾದಿಯಲ್ಲಿ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ.

ಈ) ಮೇಲಿನ ವಿದ್ಯುತ್ ಕೇಂದ್ರ ಸ್ಥಾಪನೆ ಆಗುವ ತನಕ ತಾತ್ಕಾಲಿಕವಾಗಿ ಒಂದು 8 ಎಂ.ವಿ.ಎ. ಪರಿವರ್ತಕವನ್ನು (ಟ್ರಾನ್ಸ್ ಫಾರ್ಮರ್) ಸ್ಥಾಪಿಸಲಾಗುತ್ತಿದೆಯೆ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):-

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತುಮಕೂರಿನಲ್ಲಿ ವಿದ್ಯುಚ್ಛಕ್ತಿ ಅಡಚಣೆಯನ್ನು ನಿವಾರಿಸಲು ತುಮಕೂರು ತಾಲ್ಲೂಕಿನ ಅಂತರಸನಹಳ್ಳಿಯಲ್ಲಿ 2.100 ಎಂ.ವಿ.ಎ.ಯ 2120:66 ಕೆ.ವಿ. ವಿದ್ಯುತ್ ಕೇಂದ್ರವನ್ನು ವಿಶ್ವ ಬ್ಯಾಂಕಿನ ನೆರವಿನಡಿಯಲ್ಲಿ ಸ್ಥಾಪಿಲಾಗುತ್ತಿದೆ.

ಆ) ತುಮಕೂರಿನ ವಿದ್ಯುತ್ ಕೇಂದ್ರದಲ್ಲಿ ಹಾಲಿ ಇರುವ 1x8 ಎಂ.ವಿ.ಎ. 66.11 ಕೆ.ವಿ. ಪರಿವರ್ತಕದ (ಟ್ರಾನ್ಸ್ ಫಾರ್ಮರ್) ಬದಲಿಗೆ 1X12.5 ಎಂ.ವಿ.ಎ. ಪರಿವರ್ತಕ (ಟ್ರಾನ್ಸ್ ಫಾರ್ಮರ್)ವನ್ನು 2-12-1991ರಂದು ಸ್ಥಾಪಿಸಲಾಗಿದೆ. ಇದೇ ರೀತಿ ಮತ್ತೊಂದು ಇಷ್ಟೇ ಸಾಮರ್ಥದ ಪರಿವರ್ತಕವನ್ನು ಸಹ ಶೀಘ್ರವೇ ಬದಲಾಯಿಸಲಾಗುವುದು. ಮತ್ತು 20 ಎಂ.ವಿ.ಎ.ಆರ್. ಕೆಪಾಸಿಟರ್ ಬ್ಯಾಂಕನ್ನು ಸ್ಥಾಪಿಸುವ ಕಾರ್ಯ ತ್ವರಿತಗತಿಯಲ್ಲಿ ನಡೆಯುತ್ತಿದೆ.

ಇ) ವಿಶ್ವ ಬ್ಯಾಂಕಿನ ಹಣಕಾಸಿನ ನೆರವಿನಡಿಯಲ್ಲಿ ಕೆಲಸ ಕಾರ್ಯಗಳು ತ್ವರಿತಗತಿಯಲ್ಲಿ ನಡೆಯುತ್ತಿದೆ.

ಈ) ಹೌದು

ಸರ್ಕಾರಿ ಜೂನಿಯರ್ ಕಾಲೇಜುಗಳಲ್ಲಿ ವೃತ್ತಿಪರ ಶಿಕ್ಷಣ

413 (31). ಶ್ರೀ ಇ. ವಿಜಯಕುಮಾರ್ (ಹೊಸದುರ್ಗ):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

1. ಸರ್ಕಾರಿ ಜ್ಯೂನಿಯರ್ ಕಾಲೇಜುಗಳಲ್ಲಿ ವೃತ್ತಿ ಶಿಕ್ಷಣ ಪ್ರಾರಂಭಿಸಲು ಸರ್ಕಾರವು ಉದ್ದೇಶಿಸಿದೆಯೇ?
2. ಹಾಗಿದ್ದಲ್ಲಿ ರಾಜ್ಯದ ಎಷ್ಟು ಜ್ಯೂನಿಯರ್ ಕಾಲೇಜುಗಳಲ್ಲಿ ಈ ಯೋಜನೆಯಡಿಯಲ್ಲಿ ಸೌಲಭ್ಯ ಕಲ್ಪಿಸಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)
3. ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಕಾಲೇಜುಗಳಲ್ಲಿ ಈ ಸೌಲಭ್ಯ ದೊರೆಯಲಿದೆ?
4. ಹೊಸದುರ್ಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವೃತ್ತಿ ಶಿಕ್ಷಣ ಸೌಲಭ್ಯ ನೀಡಲಾಗುವುದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):-

1. ಹೌದು.
2) ರಾಜ್ಯದ 106 ಸರ್ಕಾರಿ ಕಿರಿಯ ಕಾಲೇಜುಗಳಲ್ಲಿ ಮತ್ತು 171 ಖಾಸಗಿ ಕಾಲೇಜುಗಳಲ್ಲಿ ವೃತ್ತಿ ಶಿಕ್ಷಣ ಸೌಲಭ್ಯವನ್ನು ಒದಗಿಸಲಾಗಿದೆ. (ಜಿಲ್ಲಾವಾರು ಮಾಹಿತಿ ಒದಗಿಸಲಾಗಿದೆ)
3) ಈವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು 22 ಸರ್ಕಾರಿ ಮತ್ತು ಖಾಸಗಿ ಕಿರಿಯ ಕಾಲೇಜುಗಳಲ್ಲಿ ಈ ಸೌಲಭ್ಯ ಒದಗಿಸಲಾಗಿದೆ.
4) ಕೋರಿಕೆ ಬಂದಲ್ಲಿ ಸದರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವೃತ್ತಿ ಪರ ಶಿಕ್ಷಣ ಕೋರ್ಸುಗಳನ್ನು ನಿಯಮಾನುಸಾರ 12 ಹಂತದಲ್ಲಿ ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.